

ಅವರು ಸಿನಿಮಾದ ಅಗತ್ಯಗಳಿಗೆ ತಕ್ಕಂತೆ ಚೆನ್ನಾಗಿಯೇ ಬರೆದಿದ್ದಾರೆ. ಆದರೆ ಇದು ವಾಸ್ತವವಲ್ಲ. ಹಾಗಾಗಿ ಇಂತಹ ಸಿನಿಮಾಗಳನ್ನು ಒಂದು ಸುಂದರ ಕನಸು ಎಂದು ಆನಂದಿಸಿ ಮರೆತುಬಿಡಿ.

### ಅಂತರ್ಜಾಲದ ಬಗ್ಗೆ ಎಚ್ಚರವಿರಲಿ

ನಲವತ್ತು ವರ್ಷಗಳ ಹಿಂದೆ ಹಸ್ತಮೈಥುನದ ಬಗೆಗೆ ವೈಜ್ಞಾನಿಕ ಮಾಹಿತಿ ಪಡೆಯಲು ನಾನು ಶಿವಮೊಗ್ಗದ ಕೇಂದ್ರ ಗ್ರಂಥಾಲಯನ್ನು ಸಂಪೂರ್ಣವಾಗಿ ಜಾಲಾಡಿ ಮೂರು ಸಂಪುಟಗಳ 'ಸೈಕಾಲಜಿ ಆಫ್ ಸೆಕ್ಸ್' ಎನ್ನುವ ಅದ್ಭುತ ಪುಸ್ತಕವನ್ನು ಹುಡುಕಿದ್ದೆ. ಹೀಗೆ ಸಣ್ಣ ಸಣ್ಣ ಮಾಹಿತಿಗಳಿಗಾಗಿ ಹತ್ತಾರು ಪುಸ್ತಕಗಳಲ್ಲಿ ಅರಸುವುದು ಅಂದಿನ ಅನಿವಾರ್ಯವಾಗಿತ್ತು. ಇವತ್ತು ನಿಮಗೆ ಅಂತರ್ಜಾಲದಲ್ಲಿ ಮಾಹಿತಿಯ ಮಹಾಪೂರವೇ ಹರಿಯುತ್ತಿದೆ.

ದುರದೃಷ್ಟವೆಂದರೆ ಇದರಿಂದ ನಿಮ್ಮ ಗೊಂದಲ ತಳಮಳಗಳು ಕಡಿಮೆಯಾಗಿಲ್ಲ. ಎಲ್ಲಾ ಮಾಧ್ಯಮಗಳಂತೆ ಅಂತರ್ಜಾಲ ಕೂಡ ಯಥೇಚ್ಛವಾಗಿ ದುರುಪಯೋಗವಾಗುತ್ತಿದೆ. ಇದರಲ್ಲಿ ಸಿಗುವ ಮಾಹಿತಿಗಳು ಎಷ್ಟು ನಂಬಲರ್ಹವಾದದ್ದು ಎಂದು ನಿರ್ಧರಿಸುವುದು ಕಷ್ಟವಾಗಿದೆ. ಹಾಗಾಗಿ ನಿಮಗೆ ತಕ್ಷಣ ಆಕರ್ಷಕ ಎನ್ನಿಸುವುದರ ಕಡೆಗೆ ನಿಮ್ಮ ಮನಸ್ಸು ವಾಲುವುದು ಸಹಜ. ಕೇವಲ ತಾತ್ಕಾಲಿಕವಾಗಿ ನಿಮ್ಮ ಕಾಮನೆಗಳನ್ನು ಕೆರಳಿಸುವ ಮತ್ತು ಅವಾಸ್ತವಿಕವಾದ ಅಥವಾ ವೈಭವೀಕರಿಸಿದ ದೃಶ್ಯಾವಳಿಗಳ (ಅಂದರೆ ನೀಲಿ ಚಿತ್ರಗಳ) ಬಗೆಗೆ ಎಚ್ಚರ ವಹಿಸಿ. ಇದು ಕೇವಲ ಮಾರಾಟಕ್ಕಾಗಿ ತಯಾರಾದ ಸರಕು. ಇಲ್ಲಿ ಮನುಷ್ಯ ಸಂಬಂಧಗಳಿಗೆ ಯಾವುದೇ ಬೆಲೆ ಇರುವುದಿಲ್ಲ. ಇಂತಹ ತಾತ್ಕಾಲಿಕ ಆಕರ್ಷಣೆ ಒಂದು ಚಟವಾಗಿ ನಿಮ್ಮನ್ನು ಸುತ್ತಲಿನ ಪ್ರಪಂಚದ ವಾಸ್ತವಗಳಿಂದ ನಿಮ್ಮನ್ನು ದೂರ ತಳ್ಳಬಹುದು.

### ಕೊನೆಯದಾಗಿ

ಹೆನ್ರಿ ಡೇವಿಡ್ ಥೋರೋ ಎನ್ನುವ ದಾರ್ಶನಿಕ ಹೇಳುತ್ತಾನೆ– 'ನೀವು ಆಕಾಶದಲ್ಲಿ ಅರಮನೆಯನ್ನು ಕಟ್ಟಿ, ಆದರೆ ಅದಕ್ಕೆ ನೆಲದ ಮೇಲೆ ಭದ್ರ ಬುನಾದಿಯನ್ನು ಹಾಕಲು ಮರೆಯದಿರಿ' ಎಂದು. ಮಕ್ಕಳೇ, ನಿಮ್ಮ ಮುಂದಿನ ಜೀವನಕ್ಕೆ ಭದ್ರ ಬುನಾದಿಯನ್ನು ಹಾಕುವ ವಯಸ್ಸು ಇದು. ಅಂತಹ ಜೀವನದ ಬುನಾದಿಯನ್ನು ಹಾಕಿಕೊಳ್ಳುತ್ತಲೇ ಸ್ನೇಹ, ಪ್ರೇಮಗಳನ್ನು ಸವಿಯಿರಿ. ನಿಮ್ಮ ದೂರಗಾಮಿ ಗುರಿಗಳು ನಾವಿಕನಿಗೆ ದಿಕ್ಸೂಚಿಯಾಗಿರುವ ಲೈಟ್ ಹೌಸ್‌ನಂತೆ ಯಾವಾಗಲೂ ನಿಮ್ಮ ಕಣ್ಣಳತೆಯಲ್ಲೇ ಇರಲಿ. ಆಗ ನಿಮ್ಮ



ಹಾದಿಯಲ್ಲಿ ಬರುವ ಹರೆಯದ ಸಂಪೂರ್ಣ ಮಸ್ತಿಯನ್ನು ಅನುಭವಿಸಿ. ಲೈಟ್ ಹೌಸ್ ಕಣ್ಮರೆಯಾದೊಡನೆ ಹಡಗಿನ ನಾವಿಕರಂತೆ ತಕ್ಷಣ ಎಚ್ಚೆತ್ತು ಅದನ್ನು ಅರಸಿದ ನಂತರ ಮಾತ್ರ ಮುಂದುವರೆಯಿರಿ.

ಪ್ರೇಮಿ ಇಲ್ಲದವರು, ಪ್ರೇಮಿಯ ಹುಡುಕಾಟದಲ್ಲಿ ಇರುವವರು, ಪ್ರೇಮದಿಂದ ಮೋಸ ಹೋದವರು, ನಿರಾಶರಾದವರು– ಹೀಗೆ ಎಲ್ಲರಿಗೂ ನಿಮ್ಮದೇ ಆದ ಘನತೆ ಗೌರವಗಳಿವೆ. ನಿಮಗೆ ಎಂತಹ ಪ್ರೇಮಿ ಬೇಕು ಎನ್ನುವುದನ್ನು ತಿಳಿಯುವುದಕ್ಕಾದರೂ ನಿಮ್ಮನ್ನು ನೀವು ಗುರುತಿಸಿಕೊಳ್ಳಿ. ಹೀಗೆ ನಿಮ್ಮನ್ನು ನೀವು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುವುದೇ ನಿಮ್ಮ ಹದಿವಯಸ್ಸಿನ ಈ ಎಲ್ಲಾ ಅನುಭವಗಳನ್ನು ಅರಗಿಸಿಕೊಂಡ ನಂತರ. ಒಂದು ಸಣ್ಣ ಎಚ್ಚರಿಕೆಯೊಂದಿಗೆ ಹೊಸ ಅನುಭವಗಳಿಗೆ ನಿಮ್ಮ ಮನಸ್ಸನ್ನು ತೆರೆದುಕೊಳ್ಳಿ. ಜೀವನಕ್ಕೆ ನೀವಿಟ್ಟುಕೊಂಡಿರುವ 'ಲೈಟ್ ಹೌಸ್' ಮಾತ್ರ ನಿಮ್ಮ ಕಣ್ಣಳತೆಯಿಂದ ಮರೆಯಾಗದಿರಲಿ.

(ಲೇಖಕರ ಮೊಬೈಲ್ : 9480505258)




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

